ರಾಜ್ಯದಲ್ಲಿ ಕೆರೆ ಹೂಳೆತ್ತುವ ಯೋಜನೆ

995 (1211) - ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೂಳೆತ್ತುವ ಆಯ್ಕೆ ಮಾಡಲಾಗಿರುವ ಕೆರೆಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೇ; ಜಿಲ್ಲಾವಾರು: ತಾಲ್ಲೂಕುವಾರು ವಿವರ ನೀಡುವುದು;

ಆ) ಪ್ರಾರಂಭಿಸಿದಲ್ಲಿ, ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ ಎಷ್ಟು;

ಇ) ಪ್ರತಿ ಕೆರೆಯ ಕಾಮಗಾರಿಗೆ ನಿಗದಿ ಪಡಿಸಿರುವ ಅನುದಾನ ಎಷ್ಟು; ಜಿಲ್ಲಾವಾರು: ತಾಲ್ಲೂಕುವಾರು ಮಾಹಿತಿ ನೀಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ರೈತ ಕಾಯಕ ಕೆರೆ ಯೋಜನೆಯಡಿ ಪ್ರತಿ ಹೋಬಳಿಗೊಂದು ಕೆರೆಯಂತೆ 745 ಕೆರೆಗಳನ್ನು ಪುನರುಜ್ಜೀವನಗೊಳಿಸಲು ಉದ್ದೇಶಿಸಲಾಗಿದೆ. ಮೊದಲನೇ ಹಂತದಲ್ಲಿ ಮತ ಕ್ಷೇತ್ರಕ್ಕೆ ಒಂದು ಕೆರೆಯಂತೆ ಒಟ್ಟು 194 ಕೆರೆಗಳನ್ನು ಪುನರುಜ್ಜೀವನಗೊಳಿಸಲು ಉದ್ದೇಶಿಸಲಾಗಿರುತ್ತದೆ.

ಈ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸುತ್ತಿದ್ದು ಹಾಗೂ ನೀರು ಬಳಕೆದಾರರ ಸಂಘಗಳನ್ನು ಸ್ಥಾಪಿಸಲಾಗುತ್ತಿದ್ದು, ಇನ್ನೂ ಯಾವುದೇ ಕಾಮಗಾರಿಯನ್ನು ಪ್ರಾರಂಭಿಸಲಾಗಿಲ್ಲ ನಿಗಧಿಪಡಿಸಿರುವ ಅವಧಿ ಈ ಕೆಳಕಂಡಂತಿದೆ.

	ಕಾರ್ಯಕ್ರಮ		ಕಾಲಮಿತಿ
1)	ಅರಿವನ್ನು ಸೃಷ್ಟಿಸುವುದು, ಮತ್ತು ನೀರು ಬಳಕೆದಾರರ ಸಂಘ ರಚನೆ, ಇಲಾಖಾ ಅಧಿಕಾರಿಗಳನ್ನು ಹೊಂದಿಕೊಳ್ಳುವಂತೆ ಮಾಡುವುದು	:	6 ರಿಂದ 9 ತಿಂಗಳು
2)	ಅಂದಾಜು ತಯಾರಿಕೆ	:	3 ತಿಂಗಳು
3)	ಯೋಜನೆಯ ಅನುಷ್ಠಾನ	:	24 ತಿಂಗಳು ಅಂದಾಜು ವೆಚ್ಚವನ್ನು ಆಧರಿಸಿದೆ.

ಇ) ಪ್ರತಿಕೆರೆಯ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿರುವುದರಿಂದ, ಈ ಪ್ರಕ್ರಿಯೆ ಮುಗಿದ ನಂತರ ಪ್ರತಿ ಕೆರೆಗೆ ಅನುದಾನ ನಿಗಧಿಪಡಿಸಿಕೊಂಡು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಪಿರಿಯಾಪಟ್ಟಣಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರು ಒದಗಿಸುವುದು

997 (1213) - ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ನಗರಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರಿನ ಯೋಜನೆ ಮಂಜೂರಾಗಿದ್ದು, ಕಾಮಗಾರಿ ವಿಳಂಬವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?